# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

S.C.146/2022

C.W.20
P.W. 14

ದಿನಾಂಕಃ 07-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ಃ ಹೇಮಣ್ಣ |
| ತಂದೆಯ ಹೆಸರು | ಃ ನೀಲ್ಯನಾಯಕ್ |
| ವಯಸ್ಸು | ಃ 35 ವರ್ಷ |
| ಉದ್ಯೋಗ | ಃ ಕೂಲಿ ಕೆಲಸ |
| ವಾಸ | ಃ ಗಂಜಿ ಗುಂಟೆ ,ಚಳ್ಳಕೆರೆ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನಾವು ಇಬ್ಬರು ಮಕ್ಕಳು. ನನ್ನ ಹೆಂಡತಿಯ ಹೆಸರು ಅಂಬಿಕಾ. ನನ್ನ ಹೆಂಡತಿಗೆ ಇಬ್ಬರು ಅಕ್ಕಂದಿರು ಹಾಗೂ ಒಬ್ಬರು ತಂಗಿ ಇರುತ್ತಾಳೆ. ನ್ಯಾಯಾಲಯದ ಮುಂದೆ ಹಾಜರು ಇರುವ 2 ನೇ ಆರೋಪಿಯು ನನ್ನ ಹೆಂಡತಿಯ ತಂಗಿ. 2 ನೇ ಆರೋಪಿಯ ಗಂಡನ ಅಣ್ಣ ಅಂದರೆ ಭಾವ 1 ನೇ ಆರೋಪಿ. ನನ್ನ ಹೆಂಡತಿಯ ತಂಗಿ 2 ನೇ ಆರೋಪಿಯನ್ನು ಚನ್ನೇನಹಳ್ಳಿಯ ರವಿಚಂದ್ರನಾಯಕನಿಗೆ ಮದುವೆ ಮಾಡಿಕೊಟ್ಟಿದ್ದೇವು. 2 ನೇ ಆರೋಪಿಯ ಮನೆಯಲ್ಲಿ ಯಾರು ಯಾರು ವಾಸಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಚನ್ನೇನಹಳ್ಳಿಯಲ್ಲಿ

ರವಿಚಂದ್ರನಾಯಕ ಮತ್ತು ಸಾವಿತ್ರಿ ಬಾಯಿ 1 ವರ್ಷ ವಾಸಮಾಡಿಕೊಂಡಿದ್ದರು, ನಂತರ ಹಿರಿಯೂರು ಕಡೆ ಯಾವುದೋ ಒಂದು ಗ್ರಾಮದಲ್ಲಿ ವಾಸಮಾಡಿಕೊಂಡಿದ್ದರು, ಆದರೆ ಅದು ಯಾವ ಗ್ರಾಮ ಎಂದು ನನಗೆ ಗೊತ್ತಿಲ್ಲ. ನಾವು ಯಾವತ್ತು ಸಹ ಅವರ ಮನೆಗೆ ಹೋಗಿರುವುದಿಲ್ಲ. ನಾನು ಯಾವ ಪ್ರಕರಣದಲ್ಲಿ ಸಾಕ್ಷಿ ಹೇಳುತ್ತಿದ್ದೇನೆಂದು ನನಗೆ ಗೊತ್ತಿಲ್ಲ. ಆರೋಪಿಗಳು ಯಾವ ಕಾರಣಕ್ಕಾಗಿ ನ್ಯಾಯಾಲಯದಲ್ಲಿ ಹಾಜರಿದ್ದಾರೆಂದು ಸಹ ನನಗೆ ಗೊತ್ತಿಲ್ಲ .ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

( ಈ ಸಾಕ್ಷಿಯು ಈಃ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರ ಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

2 ನೇಆರೋಪಿಯ ಗಂಡ ಶೀಟ್ ಸೆಂಟರಿಂಗ್ ಕೆಲಸಕ್ಕೆ ಹೋಗುತ್ತಿದ್ದನು ಅಂದರೆ ನನಗೆ ಗೊತ್ತಿಲ್ಲ. ಆತ ಮದ್ಯಪಾನ ಮಾಡಿಕೊಂಡು ಬಂದು 2 ನೇ ಆರೋಪಿಗೆ ಹಿಂಸೆ ಕೊಡುತ್ತಿದ್ದನು ಅಂದರೆ ಸರಿಯಲ್ಲ. ಸದರಿ ವಿಚಾರವನ್ನು 2 ನೇ ಆರೋಪಿಯು ತಮ್ಮ ಹೆಂಡತಿಗೆ ಹೇಳುತ್ತಿದ್ದು , ನಿಮ್ಮ ಹೆಂಡತಿ ನಿಮ್ಮ ಬಳಿ ಹೇಳುತ್ತಿದ್ದಳು ಅಂದರೆ ಸರಿಯಲ್ಲ. 2 ನೇ ಆರೋಪಿಯ ಗಂಡನಿಗೆ ಬುದ್ದಿ ಹೇಳಿದರು ಸಹ ಕೇಳುತ್ತಿರಲಿಲ್ಲ ಅಂದರೆ ಸರಿಯಲ್ಲ. 2021 ನೇ ಇಸವಿಯಲ್ಲಿ ಯುಗಾದಿ ಹಬ್ಬಕ್ಕೆ ಕರೆಯಲು ನಾನು ಮತ್ತು ನನ್ನ ಹೆಂಡತಿ ಹೋಗಿದ್ದೇವು ಅಂದರೆ ಸರಿಯಲ್ಲ. 2 ನೇ ಆರೋಪಿಗೆ ಇಬ್ಬರು ಮಕ್ಕಳಿರುತ್ತಾರೆ. ನಾವು ಹಬ್ಬಕ್ಕೆ ಕರೆಯಲು ಹೋದಾಗ ಮಕ್ಕಳು ಇದ್ದರು ಅಂದರೆ ಸರಿಯಲ್ಲ. ಸದರಿ ಸಮಯದಲ್ಲಿ 1 ನೇ ಆರೋಪಿ ಮನೆಯಲ್ಲಿ ಇದ್ದನು, ತಾವು ರವಿಚಂದ್ರನಾಯಕ ಎಲ್ಲಿ ಎಂದುಕೇಳಿದಾಗ 2 ನೇ ಆರೋಪಿ ಅವರು ಮಲಗಿಕೊಂಡಿದ್ದಾರೆ ಎಬ್ಬಿಸುವುದು ಬೇಡ ಎಂದು ಹೇಳಿದಳು ಅಂದರೆ ಸರಿಯಲ್ಲ . 1 ಮತ್ತು 2 ನೇ ಆರೋಪಿಗಳು ಅನೈತಿಕ ಸಂಬಂದವನ್ನು ಇಟ್ಟುಕೊಂಡಿದ್ದು, 2 ನೇ ಆರೋಪಿಯ ಗಂಡ ಮದ್ಯಪಾನ ಮಾಡಿಕೊಂಡು ಬಂದು ಹಿಂಸೆಕೊಡುತ್ತಿದ್ದರಿಂದ 1 ಮತ್ತು 2 ನೇ ಆರೋಪಿಗಳು ಸಮಾನ ಮನಸ್ಥಿತಿಯಿಂದ ಉದ್ದೇಶವನ್ನು ಇಟ್ಟುಕೊಂಡು ರವಿಚಂದ್ರನನ್ನು ಕೊಲೆ ಮಾಡಬೇಕು ಎಂದು ಕೊಂಡರು ಅಂದರೆ ಸರಿಯಲ್ಲ . ಈಗ ಓದಿ ಹೇಳಿದಂತೆ ನನ್ನ

ಹೆಂಡತಿಯ ತಂಗಿ .......... ಕೊಲೆ ಮಾಡಿರುತ್ತಾಳೆ ಎಂಬ ಹೇಳಿಕೆಯಭಾಗವನ್ನು ನಿಪಿ-27 ಎಂದು ಗುರುತಿಸಲಾಯಿತು. ಆರೋಪಿಗಳು ನಮ್ಮ ಸಂಬಂಧಿಕರು ಆಗಿರುವುದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ .

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು